**ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಂಥಾಲಯ ಸ್ಥಾಪಿಸುವುದು**

1694 (2083) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಂಥಾಲಯ ತೆರೆಯಬೇಕೆಂಬ ಸರ್ಕಾರದ ಯೋಜನೆ ಯಾವ ಹಂತಕ್ಕೆ ತಲುಪಿದೆ;

ರಾಜ್ಯದ ಎಷ್ಟು ಗ್ರಾಮ ಪಂಚಾಯಿತಿಯಲ್ಲಿ ಗ್ರಂಥಾಲಯಗಳಿವೆ (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದ ಶಾಸಕರ ಕಛೇರಿಗೆ ಲೇಖನ ಸಾಮಗ್ರಿಗಳನ್ನು ಒದಗಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಇದರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಬಾಬುರಾವ್ ಚಾವ್ವಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಂಥಾಲಯ ತೆರೆಯಬೇಕೆಂಬ ಸರ್ಕಾರದ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿರುವ ಒಟ್ಟು 5656 ಗ್ರಾಮ ಪಂಚಾಯಿತಿಗಳ ಪೈಕಿ, 2751 ಗ್ರಾಮ ಪಂಚಾಯಿತಿಗಳಿಗೆ ಗ್ರಂಥಾಲಯಗಳು ಮಂಜೂರಾಗಿರುತ್ತದೆ. ಇವುಗಳ ಪೈಕಿ, 2728 ಗ್ರಾಮಗಳಲ್ಲಿ ಗ್ರಂಥಾಲಯಗಳು ಪ್ರಸಕ್ತದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಉಳಿದ ಮಂಜೂರಾಗಿರುವ 23 ಸ್ಥಳಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು.

ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 2728 ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ವಿವರ ಇಂತಿವೆ:

| | | | |
|---|---|---|---|
| 1) | ಬೆಂಗಳೂರು ನಗರ | - | 75 |
| 2) | ಬೆಂಗಳೂರು ಗ್ರಾಮಾಂತರ | - | 131 |
| 3) | ಬಾಗಲಕೋಟೆ | - | 105 |
| 4) | ಬೆಳಗಾವಿ | - | 160 |
| 5) | ಬಳ್ಳಾರಿ | - | 136 |
| 6) | ಬೀದರ್ | - | 107 |
| 7) | ಬಿಜಾಪುರ | - | 85 |
| 8) | ಚಾಮರಾಜನಗರ | - | 46 |
| 9) | ಚಿತ್ರದುರ್ಗ | - | 99 |
| 10) | ಚಿಕ್ಕಮಗಳೂರು | - | 102 |
| 11) | ಮಂಗಳೂರು | - | 58 |
| 12) | ದಾವಣಗೆರೆ | - | 130 |
| 13) | ಧಾರವಾಡ | - | 61 |
| 14) | ಗದಗ | - | 56 |

| 1 | 2 | 3 | 4 |
|---|---|---|---|
| 15) | ಗುಲ್ಬರ್ಗಾ | - | 148 |
| 16) | ಹಾಸನ | - | 92 |
| 17) | ಹಾವೇರಿ | - | 79 |
| 18) | ಮಡಿಕೇರಿ | - | 64 |
| 19) | ಕೋಲಾರ | - | 146 |
| 20) | ಕೊಪ್ಪಳ | - | 73 |
| 21) | ಮಂಡ್ಯ | - | 142 |
| 22) | ಮೈಸೂರು | - | 128 |
| 23) | ರಾಯಚೂರು | - | 62 |
| 24) | ಶಿವಮೊಗ್ಗ | - | 110 |
| 25) | ತುಮಕೂರು | - | 149 |
| 26) | ಉಡುಪಿ | - | 51 |
| 27) | ಕಾರವಾರ | - | 133 |
| | ಒಟ್ಟು | 0 | 2728 |

ಅ) ಇಲ್ಲ

ಉದ್ಭವಿಸುವುದಿಲ್ಲ.

## ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ

1695 (2021) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ ರಾಜ್ಯದಲ್ಲಿ ಎಂದಿನಿಂದ ಜಾರಿಗೆ ಬಂದಿದೆ ಇದಕ್ಕೆ ನಿಗಧಿಪಡಿಸಿದ ಹಣ ಎಷ್ಟು;

ಆ) ಇದರಲ್ಲಿ ರಾಜ್ಯದ ಪಾಲು ಎಷ್ಟು ಮತ್ತು ಕೇಂದ್ರದ ಪಾಲು ಎಷ್ಟು?

ಇ) ಈ ಕಾರ್ಯಕ್ರಮಕ್ಕೆ ನಿಗದಿಪಡಿಸಿದ್ದರಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು?

ಈ) ರಾಜ್ಯದ ವಿವಿಧ ಜಿಲ್ಲೆಗಳಿಗೆ ಈ ಕಾರ್ಯಕ್ರಮದಲ್ಲಿ ನಿಗಧಿಪಡಿಸಿದ ಹಣ ಎಷ್ಟು ಬಿಡುಗಡೆ ಮಾಡಿದ ಹಣ ಎಷ್ಟು; ಇದರಲ್ಲಿ ಇದುವರೆಗೆ ಖರ್ಚು ಮಾಡಿದ ಹಣ ಎಷ್ಟು?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 2001-02ನೇ ಸಾಲಿನಿಂದ ಜಾರಿಗೆ ಬಂದಿದೆ. ಯೋಜನಾ ಪೂರ್ವ ಚಟುವಟಿಕೆಗಳಿಗಾಗಿ ಕೇಂದ್ರ ಸರ್ಕಾರದಿಂದ ರೂ. 241.51 ಲಕ್ಷಗಳು ಹಾಗೂ 2001-02ನೇ ಸಾಲಿನ ವಾರ್ಷಿಕ ಯೋಜನೆಗಳಿಗಾಗಿ ರೂ. 6022.00 ಲಕ್ಷಗಳ ಯೋಜನಾ ವೆಚ್ಚವು ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿದೆ.

ಆ) ಇದರಲ್ಲಿ ಕೇಂದ್ರದ ಪಾಲು - ಶೇ. 85 ರಷ್ಟು.

ರಾಜ್ಯದ ಪಾಲು - ಶೇ. 15 ರಷ್ಟು.